ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 475
ಸದಸ್ಯರ ಹೆಸರು : ಶ್ರೀ ಸಿ.ಎಂ.ಇಬ್ರಾಹಿಂ
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 04.02.2021
ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಸ	ವಿಷಯ	ಉತ್ತರ
ಅ)	ಬೆಂಗಳೂರು ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಗಲಭೆ ಪ್ರಕರಣಗಳನ್ನು NIA ಮತ್ತು CCB ಎರಡು ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಎರಡು ತನಿಖಾ ಸಂಸ್ಥೆಗಳಿಂದ ಈವರೆಗೂ ಎಷ್ಟು FIRಗಳು ದಾಖಲಾಗಿದೆ; ಅದರಂತೆ ಎಷ್ಟು ಜನರನ್ನು ಬಂಧಿಸಲಾಗಿದೆ;	ಬೆಂಗಳೂರು ನಗರದ ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಗಲಭೆ ಪ್ರಕರಣಗಳಲ್ಲಿ **ಒಟ್ಟು 72** ಪ್ರಕರಣಗಳು ದಾಖಲಾಗಿರುತ್ತವೆ. ಸದರಿ ಪ್ರಕರಣಗಳಲ್ಲಿ ಒಟ್ಟು 426 ಜನರನ್ನು ದಸ್ತಗಿರಿ ಮಾಡಲಾಗಿರುತ್ತದೆ. 1. ಡಿ.ಜೆ.ಹಳ್ಳಿ ಪೊಲೀಸ್ ಠಾಣೆ ಮೊ.ಸಂ. 195/2020 ಮತ್ತು ಕೆ.ಜಿ.ಹಳ್ಳಿ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 229/2020 ಎರಡು ಪ್ರಕರಣಗಳನ್ನು ಎನ್.ಐ.ಎ ತಂಡಕ್ಕೆ ವರ್ಗಾವಣೆ ಮಾಡಲಾಗಿದೆ. 2. ಡಿ.ಜೆ.ಹಳ್ಳಿ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:219/2020 ಪ್ರಕರಣವನ್ನು ಸಿ.ಸಿ.ಬಿ ಘಟಕಕ್ಕೆ ವರ್ಗಾವಣೆ ಮಾಡಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಒಟ್ಟು 63 ಜನರನ್ನು ದಸ್ತಗಿರಿ ಮಾಡಲಾಗಿರುತ್ತದೆ.
ಆ)	ಪ್ರಕರಣದ ಬಂಧಿತರಲ್ಲಿ ಈವರೆಗೂ ಎಷ್ಟು ಜನರನ್ನು ಅಮಾಯಕರೆಂದು ಬಿಡುಗಡೆ ಮಾಡಲಾಗಿದೆ;	ಸದರಿ ಪ್ರಕರಣಗಳ ಬಂಧಿತರಲ್ಲಿ ಅಮಾಯಕರನ್ನು ದಸ್ತಗಿರಿ ಮಾಡಿರುವುದಿಲ್ಲ.
ಇ)	ಗಲಭೆಯು ಪೂರ್ವ ನಿಯೋಜಿತವೇ? ಹೌದಾದಲ್ಲಿ, ಗುಪ್ತಚರ ಇಲಾಖೆಯಿಂದ ಒಳಾಡಳಿತ (ಗೃಹ) ಇಲಾಖೆಗೆ ಮಾಹಿತಿ ಇರಲಿಲ್ಲವೇ; ಇಲ್ಲದಿದ್ದಲ್ಲಿ ವೈಫಲ್ಯಕ್ಕೆ ಕಾರಣಗಳೇನು;	ಬೆಂಗಳೂರು ನಗರದ ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಹಾಗೂ ಕಾವಲ್‌ಬೈರಸಂದ್ರ ವ್ಯಾಪ್ತಿಯಲ್ಲಿ ಆಗಸ್ಟ್ 11, 2020 ರಂದು ಗಲಭೆ ನಡೆದಿರುತ್ತದೆ. ಎಲ್ಲಾ 72 ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲು ಕ್ರಮವಹಿಸಲಾಗುತ್ತಿದೆ ಹಾಗೂ ಪ್ರಕರಣವು ವಿಚಾರಣಾ ಹಂತದಲ್ಲಿರುವುದರಿಂದ ಸಬ್‌ಜುಡೈಜ್ (Sub-judice) ಆಗಿರುತ್ತದೆ.
ಈ)	ಗಲಭೆಯಿಂದ ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿಗೆ ನಷ್ಟ ಉಂಟಾಗಿರುವುದನ್ನು ಅಂದಾಜಿಸಲಾಗಿದೆಯೇ; ಅಂದಾಜಿಸಿದ್ದಲ್ಲಿ, ನಷ್ಟ ಭರಿಸುವ ಬಗ್ಗೆ ಸರ್ಕಾರವು ತಕ್ಷಣಕ್ಕೆ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ಒದಗಿಸುವುದು)	ಸದರಿ ಗಲಭೆಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ W.P.No.9287/20 ಆದೇಶದನ್ವಯ ಸಾರ್ವಜನಿಕ ಆಸ್ತಿಗೆ ನಷ್ಟವುಂಟಾಗಿರುವ ಕುರಿತು ಅಂದಾಜು ಮಾಡುವ ಸಲುವಾಗಿ, ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 238 ಎಸ್‌ಎಸ್‌ಟಿ 2020ರ ದಿನಾಂಕ:05.09.2020ರಲ್ಲಿ ಕ್ಲೇಮ್ ಕಮೀಷನರ್ ರವರನ್ನು ನೇಮಿಸಲಾಗಿರುತ್ತದೆ. ಸಾರ್ವಜನಿಕ ಆಸ್ತಿಗೆ ನಷ್ಟವುಂಟಾಗಿರುವ ಕುರಿತು ಕ್ಲೇಮ್ಸ್ ಕಮೀಷನರ್ ರವರಿಂದ ವರದಿ ಸ್ವೀಕೃತವಾದ ನಂತರ ಅಗತ್ಯ ಕ್ರಮಕೈಗೊಳ್ಳಲಾಗುವುದು.

ಹೆಚ್‌ಡಿ 78 ಎಸ್‌ಎಸ್‌ಟಿ 2021

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

DO_ACS